**ಸಾಕ್ಷಿಯನ್ನು ದಿನಾಂಕ 21.08.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನನ್ನ ತಂದೆಗೆ ನಾನು ಮತ್ತು ನನ್ನ ತಮ್ಮ ಇಬ್ಬರೇ ಮಕ್ಕಳಿರುತ್ತೇವೆ. ನನ್ನ ಅಜ್ಜನಿಗೆ 8 ಜನ ಮಕ್ಕಳಿದ್ದು ಅವರಲ್ಲಿ ಒಬ್ಬರು ಮರಣ ಹೊಂದಿರುತ್ತಾರೆ. ಉಳಿದ 7 ಜನ ಮಕ್ಕಳು ಬೇರೆ ಬೇರೆ ವಾಸವಿರುತ್ತಾರೆ. ನಮ್ಮ ಕುಟುಂಬಕ್ಕೆ ಇರುವ 10 ಎಕರೆ ಜಮೀನು ಎಲ್ಲರಿಗೂ ಹಂಚಿಕೆಯಾಗಿದೆ ಅಂದರೆ ಸರಿಯಲ್ಲ. ನನ್ನ ಅಜ್ಜನ 7 ಜನ ಮಕ್ಕಳಲ್ಲಿ 5 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. 10 ಎಕರೆ ಜಮೀನಿನಿಂದ ಬರುವ ಆದಾಯವನ್ನು ನನ್ನ ತಂದೆ ಮತ್ತು ಚಿಕ್ಕಪ್ಪ ಪಡೆದುಕೊಳ್ಳುತ್ತಾರೆ. ಅವರ ಉಳಿದ 3 ಜನ ಸಹೋದರರಲ್ಲಿ ಒಬ್ಬರು ಸರ್ಕಾರಿ ಕೆಲಸ ಮಾಡುತ್ತಿದ್ದು ಉಳಿದಿಬ್ಬರು ಸ್ವಂತ ವ್ಯವಹಾರ ಮಾಡುತ್ತಾರೆ. ಜಮೀನಿನಿಂದ ಬಂದ ಫಸಲನ್ನು ಮಾರುಕಟ್ಟೆಗೆ ಮಾರುವುದು ಮತ್ತು ವ್ಯವಹಾರವನ್ನು ನೋಡಿಕೊಳ್ಳುವುದನ್ನು ನನ್ನ ತಂದೆ ಮಾಡುತ್ತಾರೆ. ನಾನು ನನ್ನ ತಂದೆಯೊಂದಿಗೆ ವಾಸ ಮಾಡುತ್ತೇನೆ. ನಾನು ನನ್ನ ತಂದೆ ಮತ್ತು ನಮ್ಮ ಕುಟುಂಬ ಅಣ್ಣಿಗೇರಿಯಲ್ಲಿ ವಾಸ ಮಾಡುತ್ತೇವೆ. ಜಮೀನಿನಿಂದ ಬಂದ ಆದಾಯಕ್ಕೆ ಸಂಬಂಧಿಸಿದಂತೆ ವ್ಯವಹಾರವನ್ನು ನಮ್ಮ ತಂದೆ ಎಸ್.ಬಿ.ಐ.ಬ್ಯಾಂಕ್ ಖಾತೆ ಮೂಲಕ ನಿರ್ವಹಿಸುತ್ತಾರೆ. ನನ್ನ ಸ್ವಂತ ಬ್ಯಾಂಕ್ ಖಾತೆ ಐ.ಡಿ.ಬಿ.ಐ.ಬ್ಯಾಂಕಿನಲ್ಲಿ ಇರುತ್ತದೆ. ಜಮೀನಿನಿಂದ ಬಂದ

ಆದಾಯದ ನಿರ್ವಹಣೆಯನ್ನು ನನ್ನ ತಂದೆಯ ಬ್ಯಾಂಕ್ ಖಾತೆಯ ಮೂಲಕ ಮಾತ್ರ ನಿರ್ವಹಿಸುತ್ತಾರೆ ಅಂದರೆ ನನ್ನ ಬ್ಯಾಂಕ್ ಖಾತೆ ಮೂಲಕವೂ ನಿರ್ವಹಿಸುತ್ತೇನೆ. ಜಮೀನಿನಿಂದ ವಾರ್ಷಿಕ ನಿವ್ವಳ ಆದಾಯ ರೂ.6 ಲಕ್ಷದಿಂದ ರೂ.7 ಲಕ್ಷ ಆಗಿರುತ್ತದೆ. ಸದರಿ ಆದಾಯದಲ್ಲಿ ನನಗೂ ಪಾಲು ಕೊಡುತ್ತಾರೆ. ಎಷ್ಟು ಪಾಲು ಕೊಡುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವಶ್ಯಕತೆಗೆ ಬೇಕಾದಷ್ಟು ಕೊಡುತ್ತಾರೆ ಎಂದು ನುಡಿಯುತ್ತಾರೆ.

ದಿ:10-07-2022 ರಿಂದ 28-09-2022 ರ ವರೆಗೆ ನಾನು ಪ್ರತಿವಾದಿಗೆ ಒಟ್ಟು ರೂ.34 ಲಕ್ಷವನ್ನು ನೀಡಿದ್ದಾಗಿ ಹೇಳಿದ್ದು ಸದರಿ ಹಣವನ್ನು ನಾನು ಖರೀದಿಸಿದ್ದ ಪ್ಲಾಟಗಳ ಮಾರಾಟದಿಂದ ನೀಡಿರುತ್ತೇನೆ. ಆ ರೀತಿ ಪ್ಲಾಟ್ ಮಾರಾಟದಿಂದ ಬಂದ ಹಣವನ್ನು ನಾನು ವ್ಯವಹಾರಕ್ಕೆ ಹಾಕಿರುತ್ತೇನೆ. ಆ ರೀತಿ ಮಾರಾಟದ ಹಣವನ್ನು ಆರ್.ಟಿ.ಜಿ.ಎಸ್. ಅಥವಾ ಬ್ಯಾಂಕ್ ಟ್ರ್ಯಾನ್ಸಕ್ಷನ್ ಮೂಲಕ ಮಾಡುತ್ತಾರೆ ಅಂದರೆ ನಾನು ನಗದಾಗಿ ವ್ಯವಹಾರ ಮಾಡಿರುತ್ತೇನೆ. ನಾನು 5 ಪ್ಲಾಟಗಳನ್ನು ಮಾರಾಟ ಮಾಡಿದ್ದು ಅದರಿಂದ ನನಗೆ ರೂ.26 -27 ಲಕ್ಷ ಬಂದಿರುತ್ತದೆ. ಸದರಿ ಪ್ಲಾಟಗಳನ್ನು ಮಾರಾಟ ಮಾಡಿದ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ರೂ.20 ಸಾವಿರಕ್ಕೂ ಮೇಲಿನ ವ್ಯವಹಾರವನ್ನು ನಾವು ಆರ್.ಟಿ.ಜಿ.ಎಸ್, ಚೆಕ್ ಅಥವಾ ಬ್ಯಾಂಕ್ ಟ್ರ್ಯಾನ್ಸಕ್ಷನ್ ಮೂಲಕವೇ ನಿರ್ವಹಿಸಬೇಕು ಅಂದರೆ ನನಗೆ ಗೊತ್ತಿಲ್ಲ. 2020-21 ರಲ್ಲಿ ನಾನು ಸದರಿ

ಪ್ಲಾಟಗಳನ್ನು ಮಾರಾಟ ಮಾಡಿರುತ್ತೇನೆ. 2020-21 ನೇ ಸಾಲಿನಲ್ಲಿ ನಾನು ಐ.ಟಿ.ಆರ್.ಸಲ್ಲಿಸಿರುವುದಿಲ್ಲ. ಖರೀದಿ ವ್ಯವಹಾರಕ್ಕೆ ಆಧಾರ ಕಾರ್ಡ್ ಮತ್ತು ಪ್ಯಾನ್ ಕಾರ್ಡಗಳನ್ನು ಹಾಜರುಪಡಿಸಿ ಮಾಡುತ್ತಾರೆ ಅಂದರೆ ಸರಿ. ನಾನು ಹೇಳುವ ರೂ.26-27 ಲಕ್ಷದ ವ್ಯವಹಾರವನ್ನು ಸರ್ಕಾರಕ್ಕೆ ಐ.ಟಿ.ಆರ್.ಸಲ್ಲಿಸದೇ ಮೋಸ ಮಾಡಿರುತ್ತೇನೆ ಅಂದರೆ ಸರಿಯಲ್ಲ.

ದಿಃ10-07-2022 ರಂದು ನೀವು ರೂ.7 ಲಕ್ಷವನ್ನು ಪ್ರತಿವಾದಿಗೆ ಕೊಟ್ಟಿದ್ದಾಗಿ ಹೇಳಿದ್ದು ಸದರಿ ಹಣ ಎಲ್ಲಿಂದ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ರೂ.7 ಲಕ್ಷ ತಮ್ಮ ಬಳಿ ನಗದು ಇದ್ದುದ್ದಾಗಿ ನುಡಿಯುತ್ತಾರೆ. ದಿಃ15-07-2022 ರಂದು ನೀವು ರೂ.10 ಲಕ್ಷವನ್ನು ಪ್ರತಿವಾದಿಗೆ ಕೊಟ್ಟಿದ್ದಾಗಿ ಹೇಳಿದ್ದು ಸದರಿ ಹಣ ಎಲ್ಲಿಂದ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ರೂ.10 ಲಕ್ಷ ತಮ್ಮ ಬಳಿ ನಗದು ಇದ್ದು ಅದು ವ್ಯವಹಾರದಿಂದ ಬಂದಿದ್ದಾಗಿ ನುಡಿಯುತ್ತಾರೆ. ದಿಃ22-08-2022 ರಂದು ನೀವು ರೂ.10 ಲಕ್ಷವನ್ನು ಪ್ರತಿವಾದಿಗೆ ಕೊಟ್ಟಿದ್ದಾಗಿ ಹೇಳಿದ್ದು ಸದರಿ ಹಣ ಎಲ್ಲಿಂದ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ರೂ.10 ಲಕ್ಷ ತಮ್ಮ ಬಳಿ ನಗದು ಇದ್ದು ಅದು ವ್ಯವಹಾರದಿಂದ ಬಂದಿದ್ದಾಗಿ ನುಡಿಯುತ್ತಾರೆ. ಆ ರೀತಿ ಹಂತ ಹಂತವಾಗಿ ಪ್ರತಿವಾದಿಗೆ ನಾನು ಹಣ ನೀಡಿದ ಬಗ್ಗೆ ಅವರಿಂದ ಯಾವುದೇ ರಶೀಧಿಯನ್ನು ಪಡೆದುಕೊಂಡಿರುವುದಿಲ್ಲ.

ಅಷ್ಟು ದೊಡ್ಡ ಮೊತ್ತದ ವ್ಯವಹಾರ ಮಾಡುವಾಗ ಯಾವುದೇ ರಶೀದಿ ಅಥವಾ ಕರಾರು ಮಾಡಬೇಕಾಗಿತ್ತು ಎಂಬ ಸೂಚನೆಗೆ ಸಾಕ್ಷಿಯು ಈ ಬಗ್ಗೆ ತಾವು ಪ್ರತಿವಾದಿಯನ್ನು ಕೇಳಿದ್ದು ಪ್ರತಿವಾದಿಯೇ ಆಸ್ತಿಯ ಉತಾರಿನಲ್ಲಿ ಅವರ ಹೆಸರಿನೊಂದಿಗೆ ಅವರ ಅಕ್ಕ ಮತ್ತು ತಮ್ಮನ ಹೆಸರು ಜಂಟಿಯಾಗಿದ್ದು ಆಸ್ತಿಗೆ ಸಂಬಂಧಿಸಿದಂತೆ 11E ನಕ್ಷೆ ಮಾಡಿಸಿದ ನಂತರ ಕರಾರು ಬರೆದುಕೊಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ನಾನು ರೂ.34 ಲಕ್ಷವನ್ನು ಹಂತ ಹಂತವಾಗಿ ನಗದು ಮೂಲಕ ಪ್ರತಿವಾದಿಗೆ ನೀಡಿರುತ್ತೇನೆ. ಅಷ್ಟು ಹಣವನ್ನು ಪ್ರತಿವಾದಿಗೆ, ಅವರು ನನಗೆ ಪರಿಚಿತರಾಗಿದ್ದರಿಂದ ವಿಶ್ವಾಸದ ಮೇಲೆ ನೀಡಿರುತ್ತೇನೆ.

ನನಗೆ ಸುಮಾರು 8 ವರ್ಷಗಳಿಂದ ಪ್ರತಿವಾದಿ ಪರಿಚಿತರಾಗಿರುತ್ತಾರೆ. ಪ್ರತಿವಾದಿಯ ಮನೆತನ ಮತ್ತು ಆಸ್ತಿಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಹೇಮಂತ ಬಳಗಲಿರವರ ಹುಬ್ಬಳ್ಳಿ ಕಛೇರಿಯಲ್ಲಿ ಪ್ರಕಾಶ ಗಂಗಪ್ಪ ಮುತ್ತಗಿರವರ ಸಮಕ್ಷಮ ನಾನು ಪ್ರತಿವಾದಿಯಿಂದ ಚೆಕ್ ಮತ್ತು ಖಾಲಿ ಬಾಂಡ್ ಅನ್ನು ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ದಿನ ಪ್ರತಿವಾದಿಗೆ ನಾನು ಹೇಮಂತ ಬಳಗಲಿರವರ ಮೂಲಕ ರೂ.1 ಲಕ್ಷ ಸಾಲ ಕೊಡಿಸಿದ್ದು ಅದರಲ್ಲಿ ರೂ.10 ಸಾವಿರ ಬಡ್ಡಿ ಕಳೆದು ರೂ.90,000/- ಕ್ಕೆ ಹೇಮಂತ ಬಳಗಲಿರವರಿಂದ ಪ್ರತಿವಾದಿಗೆ ಒಂದು ಚೆಕ್ ಅನ್ನು ಕೊಡಿಸಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಚೆಕ್ ಅನ್ನು ನಾನು ಹೇಳುವವರೆಗೆ ಬ್ಯಾಂಕಿಗೆ ಹಾಜರುಪಡಿಸದಂತೆ

ಪ್ರತಿವಾದಿಗೆ ಹೇಳಿದ್ದೆ ಅಂದರೆ ಸರಿಯಲ್ಲ. ಸದರಿ ಚೆಕ್ ಎಸ್.ಬಿ.ಐ. ಖಾತೆಗೆ ಸಂಬಂಧಿಸಿದ ದಿನಾಂಕ 15-11-2022 ರ ಚೆಕ್ ಆಗಿದ್ದು ಅದರ ನಂಬರ್ 567027 ಆಗಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದವರೆದು ತಾವು ಆ ರೀತಿ ಯಾವುದೇ ವ್ಯವಹಾರ ಮಾಡಿಸಿರುವುದಿಲ್ಲ ಎನ್ನುತ್ತಾರೆ. ಹೇಮಂತ ಬಳಗಲಿರವರು ಅಣ್ಣಿಗೇರಿ ಗ್ರಾಮದವರು. ಅವರು ಮತ್ತು ನಾನು ಒಂದೇ ಗ್ರಾಮದವರು ಅಂದರೆ ಸರಿ. ಪ್ರತಿವಾದಿಯ ತಾಯಿಗೆ ಕ್ಯಾನ್ಸರ್ ಇದ್ದುದ್ದರಿಂದ ಅವರ ಚಿಕಿತ್ಸೆಗಾಗಿ ಪ್ರತಿವಾದಿ ಕೈಗಡ ಸಾಲ ಮಾಡಿಕೊಂಡಿದ್ದು ಚೆಕ್ ಅನ್ನು ಬ್ಯಾಂಕಿಗೆ ಹಾಜರುಪಡಿಸಿ ಹಣ ಪಡೆದುಕೊಳ್ಳುವುದಾಗಿ ನನ್ನನ್ನು ಕೇಳಿದರು ಅಂದರೆ ಸರಿಯಲ್ಲ. ನಾನು ಹೇಳುವವರೆಗೆ ಚೆಕ್ ಅನ್ನು ಹಾಜರುಪಡಿಸದಂತೆ ಹೇಳಿ ಮುಂದಿನ ದಿನಾಂಕವನ್ನು ಚೆಕ್ಕಿನಲ್ಲಿ ನಮೂದಿಸಿರುತ್ತೇನೆ ಅಂದರೆ ಸರಿಯಲ್ಲ. ನಿ.ಪಿ.1 ಕರಾರು ಪತ್ರಕ್ಕೆ ಮೊದಲೇ ಸದರಿ ಚೆಕ್ ಅನ್ನು ಪ್ರತಿವಾದಿಗೆ ಕೊಡಿಸಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿ ಎಷ್ಟೋ ಕಷ್ಟದ ಸಂದರ್ಭದಲ್ಲಿಯೂ ಬ್ಯಾಂಕಿಗೆ ಹಾಜರುಪಡಿಸಿರುವುದಿಲ್ಲ ಅಂದರೆ ಅವರವರ ನಡುವಿನ ವ್ಯವಹಾರ ನನಗೆ ಗೊತ್ತಿಲ್ಲ.

ನಿ.ಪಿ.1 ರಲ್ಲಿ ಕರಾರು ಎಂದು ಮಾತ್ರ ನಮೂದಾಗಿರುತ್ತದೆ ಅಂದರೆ ಅದನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ. ನಿ.ಪಿ.1 ರಲ್ಲಿನ ಅಂಶಗಳು ನನಗೆ ಗೊತ್ತಿರುವುದಿಲ್ಲ ಅಂದರೆ ಸರಿಯಲ್ಲ. ನಿ.ಪಿ.1 ಅನ್ನು ಹುಬ್ಬಳ್ಳಿ ನ್ಯಾಯಾಲಯದಲ್ಲಿ ನಾನು ಮತ್ತು ಪ್ರತಿವಾದಿ ಸೇರಿ

ಮಾಹಿತಿ ನೀಡಿ ಮಾಡಿಸಿರುತ್ತೇವೆ. ನಿ.ಪಿ.1 ರ ಎರಡೂ ಪುಟಗಳಲ್ಲಿ ಹೆಬ್ಬೆಟ್ಟಿನ ಗುರುತಿಗೆ Whitener ಹಚ್ಚಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿಯು ಪ್ರತಿವಾದಿಯು ಸದರಿ ಹೆಬ್ಬೆಟ್ಟಿನ ಗುರುತು ಹಾಕುವಾಗ ಗುರುತು ಸಿಗಬಾರದು ಎಂದು ಎರಡೆರಡು ಬಾರಿ ಒತ್ತಿದ್ದರಿಂದ ಅದರ ಮೇಲೆ Whitener ಹಚ್ಚಲಾಗಿರುತ್ತದೆ ಎನ್ನುತ್ತಾರೆ. ಹೇಮಂತ ಬಳಗಲಿರವರ ಕಛೇರಿಯಲ್ಲಿ ಎರಡು ಖಾಲಿ ಬಾಂಡಗಳಿಗೆ ಪ್ರತಿವಾದಿಯ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಳ್ಳಲಾಗಿರುತ್ತದೆ ಅಂದರೆ ಸರಿಯಲ್ಲ. ನಿ.ಪಿ.1 ರಲ್ಲಿನ ಸದರಿ ಹೆಬ್ಬೆಟ್ಟಿನ ಗುರುತಿಗೆ Whitener ಹಚ್ಚುವ ಅವಶ್ಯಕತೆ ಇರಲಿಲ್ಲ ಅಂದರೆ ತಮ್ಮ ವಕೀಲರು ಹೆಬ್ಬೆಟ್ಟಿನ ಗುರುತಿಗೆ Whitener ಹಚ್ಚಿಸಿ ಪ್ರತಿವಾದಿಯ ಹೊಸ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತಾರೆ.

ನಿ.ಪಿ.1 ಕ್ಕೆ ಹುಬ್ಬಳ್ಳಿಯ ವಕೀಲರಾದ ಮುಕ್ತಾ ಎಂ. ಕಲ್ಯಾಣಕರ್ ಅವರು ಸಹಿ ಮಾಡಿರುತ್ತಾರೆ. ನಿ.ಪಿ.1 ಅನ್ನು ವಕೀಲರ ಸಲಹೆ ಮೇರೆಗೆ ತಯಾರಿಸಲಾಗಿದೆ ಅಂದರೆ ನಾನು ಮತ್ತು ಪ್ರತಿವಾದಿ ಸೇರಿ ಮಾಹಿತಿ ನೀಡಿದ ಮೇರೆಗೆ ತಯಾರಿಸಲಾಗಿದೆ. ನಿ.ಪಿ.1 ಅನ್ನು ಯಾಕೆ ನೋಟರಿಕೃತ ಮಾಡಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆ ದಿನ ತಡವಾಗಿದ್ದರಿಂದ, ಪ್ರತಿವಾದಿಯು ಭಾವಚಿತ್ರವನ್ನು ತಂದಿರದಿದ್ದರಿಂದ ಮತ್ತು ಪ್ರತಿವಾದಿಗೆ ಹಣದ ಅತೀ ಅವಶ್ಯಕತೆ ಇದ್ದುದ್ದರಿಂದ ನೋಟರಿಕೃತ ಮಾಡಿಸಿರುವುದಿಲ್ಲ ಎನ್ನುತ್ತಾರೆ. ನಿ.ಪಿ.1 ರ

2 ನೇ ಪುಟದಲ್ಲಿ ಎಲ್ಲರ ಸಹಿಯನ್ನು ಇಕ್ಕಟ್ಟಾಗಿ ಪಡೆದುಕೊಳ್ಳುವ ಅವಶ್ಯಕತೆ ಇರಲಿಲ್ಲ ಅಂದರೆ ಆ ಬಗ್ಗೆ ಕಂಪ್ಯೂಟರ್ ಆಪರೇಟರ್ ಅವರನ್ನು ಕೇಳಬೇಕು. ನಿ.ಪಿ.1 ರ 2 ನೇ ಪುಟದಲ್ಲಿ 'ಪತ್ರ ಬರೆಸಿಕೊಂಡವರ ಸಹಿ' ಮತ್ತು 'ಪತ್ರ ಬರೆದುಕೊಟ್ಟವರ ಸಹಿ' ಎಂದು ನಮೂದಿಸಿರುವಲ್ಲಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಇಲ್ಲದಿದ್ದು ಸ್ವಲ್ಪ ದೂರದಲ್ಲಿ ಇರುತ್ತವೆ ಎಂಬ ಸೂಚನೆಗೆ ಸಾಕ್ಷಿಯು ತಮಗೆ ಹೇಳಿದ್ದಲ್ಲಿ ತಾವು ಸಹಿ ಮಾಡಿದ್ದಾಗಿ ನುಡಿಯುತ್ತಾರೆ. ನಿ.ಪಿ.1 2 ನೇ ಪುಟದ ನಾಲ್ಕೂ ಕಡೆಗಳಲ್ಲಿ ಸರಿಯಾದ ಮಾರ್ಜಿನ್ ಬಿಟ್ಟಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ತಯಾರಿಸಿದವರ ಮತ್ತು ಸಾಕ್ಷಿದಾರರ ಸಾಕ್ಷ್ಯವನ್ನು ಮಾಡಿಸುತ್ತೇನೆ. ನಿ.ಪಿ.1 ರ ಖಾಲಿ ಬಾಂಡಿಗೆ ಸಹಿ ಪಡೆದುಕೊಂಡಿದ್ದರಿಂದ ಮತ್ತು ಯಾವುದೇ ಹೆಚ್ಚುವರಿ ಪುಟದಲ್ಲಿ ಸಹಿ ಇಲ್ಲದ್ದರಿಂದ ಒಂದೇ ಪುಟದಲ್ಲಿ ಅಡ್ಜಸ್ಟ್ ಮಾಡಿ ಟೈಪ್ ಮಾಡಲಾಗಿರುತ್ತದೆ ಅಂದರೆ ಸರಿಯಲ್ಲ.

ನಿ.ಪಿ.1 ಅನ್ನು ಯಾಕೆ ನೋಂದಾಯಿಸಿರುವುದಿಲ್ಲ ಎಂಬ ಪ್ರಶ್ನೆಗೆ ಆಸ್ತಿಯು ಮೂರು ಜನರ ಜಂಟಿ ಹೆಸರಿನಲ್ಲಿ ಇದ್ದುದ್ದರಿಂದ ನೋಂದಾಯಿಸಿರುವುದಿಲ್ಲ. ದಾವಾ ಆಸ್ತಿ ಜಂಟಿ ಆಸ್ತಿಯಾಗಿರುತ್ತದೆ ಅಂದರೆ ಸರಿ. ನಿ.ಪಿ.1 ರ ವ್ಯವಹಾರದ ಬಗ್ಗೆ ದಾವಾ ಆಸ್ತಿಯ ಉತಾರಿನಲ್ಲಿರುವ ಉಳಿದವರಿಗೆ ನಾನು ತಿಳಿಸಿರುವುದಿಲ್ಲ. ನಿ.ಪಿ.1 ಆಗುವ ಕಾಲಕ್ಕೆ ದಾವಾ ಆಸ್ತಿಯ ಹೆಸರು ಮೂರು ಜನರ ಹೆಸರಲ್ಲಿ ದಾಖಲಿತ್ತು. ನಿ.ಪಿ.1 ಅನ್ನು ಪ್ರತಿವಾದಿಯ 1/3

ಹಿಸ್ಸೆಗೆ ಮಾಡಬಹುದಿತ್ತು ಅಂದರೆ ಆ ರೀತಿ ಮಾಡಲು ಉಪ ನೋಂದಣಿ ಕಛೇರಿಯಲ್ಲಿ ಆಗುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

sd/-
2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ,
ಧಾರವಾಡ.